ವಿಷಯ : ಧಾರವಾಡ ಜಿಲ್ಲೆಯಲ್ಲಿನ ಕಿರಿಯ ಕಾಲೇಜುಗಳಲ್ಲಿ ಪ್ರಾಚಾರ್ಯ ಹುದ್ದೆಗಳನ್ನು ಭರ್ತಿ ಮಾಡುವುದು.

ಪ್ರ. 212 (64) ಶ್ರೀ ಹೆಗ್ಗಪ್ಪ ಲಮಾಣಿ (ಬ್ಯಾಡಗಿ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯ ಸರಕಾರಿ ಜ್ಯೂನಿಯರ್ ಕಾಲೇಜುಗಳಲ್ಲಿರುವ ಪ್ರಾಚಾರ್ಯರ (ಪ್ರಿನ್ಸಿಪಾಲ್ಸ್) ಸ್ಥಾನಗಳು ಖಾಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ.

(ಆ) ಹಾಗಿದ್ದಲ್ಲಿ ಖಾಲಿ ಇರುವ ಸ್ಥಾನಗಳ ಸಂಖ್ಯೆ ಎಷ್ಟು ;

(ಇ) ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ.

(ಈ) ಸದರಿ ಹುದ್ದೆಗಳನ್ನು ಈವರೆಗೂ ತುಂಬದಿರಲು ಕಾರಣಗಳೇನು ;

(ಉ) ಬ್ಯಾಡಗಿ ಜ್ಯೂನಿಯರ್ ಕಾಲೇಜಿನ ಪ್ರಾಚಾರ್ಯರ ಹುದ್ದೆಯನ್ನು ಆದಷ್ಟು ಬೇಗನೇ ತುಂಬಲಾಗುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) 4—ಈ ಹುದ್ದೆಗಳಲ್ಲಿ ಇನ್‌ಚಾರ್ಜ್ ವ್ಯವಸ್ಥೆ ಮಾಡಲಾಗಿದೆ.

(ಇ) 1980 ರಿಂದೀಚೆಗೆ ಖಾಲಿ ಇವೆ.

(ಈ) ಉಪನ್ಯಾಸಕರುಗಳನ್ನು ಪ್ರಾಚಾರ್ಯರನ್ನಾಗಿ ಬಡ್ತಿ ನೀಡುವ ಬಗ್ಗೆ ನಿಯಮಾವಳಿಯನ್ನು ಬದಲಾವಣೆ ಮಾಡಬೇಕಾಗಿತ್ತು. ಈಗ ಬದಲಾವಣೆ ಮಾಡಲಾಗಿದೆ. ಉಪನ್ಯಾಸಕರುಗಳ ಶ್ರೇಣಿ ಸೂಚಿ ಪಟ್ಟಿಯನ್ನು ಅಖೈರಾಗಿ ಸಿದ್ಧಗೊಳಿಸಲಾಗುತ್ತಿದೆ. ಆದ್ದರಿಂದ ಸಧ್ಯದಲ್ಲಿಯೇ ಪ್ರಾಚಾರ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

(ಉ) ಆದಷ್ಟು ಬೇಗನೆ ತುಂಬಲಾಗುವುದು.

ಶ್ರೀ ಹೆಗ್ಗಪ್ಪ ಲಮಾಣಿ.—ಈಗ ಜ್ಯೂನಿಯರ್ ಕಾಲೇಜುಗಳಲ್ಲಿ ಲೆಕ್ಚರರ್ಸ್ ಬಹಳ ಕಡಿಮೆ ಇದ್ದಾರೆ. ಈ ಉಪನ್ಯಾಸಕರಲ್ಲಿ ಒಬ್ಬಿಬ್ಬರನ್ನು ಬೇರೆ ಕೆಲಸ ನೋಡಲಿಕ್ಕೆ ಹೇಳಿದರೆ ಮತ್ತಷ್ಟು ಜನ ಕಡಿಮೆಯಾಗುತ್ತದೆ. ಕೆಲವೊಂದು ಪೀರಿಯಡ್‌ಗಳು ಕಡಿಮೆಯಾಗುತ್ತವೆ. ಹಿಂದಿನ ಅಧಿವೇಶನದಲ್ಲಿ ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳಿದ್ದೀರಿ. ಇದು ಮತ್ತೆ 7–8 ತಿಂಗಳುಗಳು ಆಗಬಾರದು ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ತಾವು ಕೇಳುತ್ತಿರುವ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದಾರೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ವಿಷಯ. ರಾಣೆಬೆನ್ನೂರಿನ ಆರ್.ಟಿ.ಇ.ಎಸ್. ವಿದ್ಯಾಸಂಸ್ಥೆಯವರು ನಡೆಸುತ್ತಿರುವ ಕಲಾ. ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು.

ಪ್ರ. 213 (125) ಶ್ರೀ ಬಿ. ಜಿ. ಪಾಟೀಲ್* (ರಾಣೆಬೆನ್ನೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ರಾಣೆಬೆನ್ನೂರಿನಲ್ಲಿ ಆರ್.ಟಿ.ಇ.ಎಸ್. ವಿದ್ಯಾಸಂಸ್ಥೆಯವರು ಸದ್ಯ ನಡೆಸುತ್ತಿರುವ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಕಟ್ಟಡದ ಒಡೆತನ ಯಾರದ್ದು ಹಾಗೂ ಆವನ್ನು ಯಾವ ಷರತ್ತಿನ ಮೇಲೆ ಹಾಗೂ ಯಾವ ಅವಧಿಯವರೆಗೆ ಸದರಿ ಸಂಸ್ಥೆಗೆ ಕೊಡಲಾಗಿದೆ;

(ಆ) ಸದರಿ ಸಂಸ್ಥೆಯವರು ನಡೆಸುತ್ತಿರುವ ಕಾಲೇಜಿನಿಂದ ಪೂರ್ವದಿಂದಲೂ ನಡೆಸುತ್ತಾ ಬಂದಿರುವ ಗಂಡು ಹಾಗೂ ಹೆಣ್ಣು ಮಕ್ಕಳ ವಿದ್ಯಾರ್ಥಿಗಳಿಗೆ ಕಟ್ಟಡದಲ್ಲಿ ಆವ ಅಭಾವವ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿರುತ್ತಾರೆ ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಸಚಿವರು).—

(ಅ) ವಿದ್ಯಾಸಂಸ್ಥೆಯ ಕಟ್ಟಡವು ಮುನಿಸಿಪಾಲಿಟಿಯವರಿಗೆ ಸಂಬಂಧಪಟ್ಟಿದ್ದು. ಅವರಿಂದ ಕಾಲೇಜಿನವರು 99 ವರ್ಷಗಳವರೆಗೆ ಗುತ್ತಿಗೆಯ ಮೇಲೆ ಪಡೆದಿದ್ದಾರೆ.

(ಆ) ಸರ್ಕಾರದ ಹೊಸ ಕಟ್ಟಡವನ್ನು ಬೇಗನೇ ಕಟ್ಟಿಸಬೇಕೆಂದು ಆರ್.ಟಿ.ಇ.ಎಸ್. ವಿದ್ಯಾಸಂಸ್ಥೆಯವರಿಗೆ ಒತ್ತಾಯಪಡಿಸುತ್ತಲಿದೆ. ಸಂಸ್ಥೆಯವರು ಈಗಾಗಲೇ ಹೊಸ ಕಟ್ಟಡವನ್ನು ಕಟ್ಟಿಸಲು ಕ್ರಮ

* ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಕೈಗೊಂಡಿದ್ದಾರೆ. ಕಟ್ಟಡವು ಮೇಲ್ಛಾವಣಿಯವರೆಗೆ ಬಂದಿದ್ದು, ಮುಂದಿನ ಕ್ರಮಕ್ಕಾಗಿ ಧಾರವಾಡ ಜಿಲ್ಲೆಯ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ತಾಂತ್ರಿಕ ಮಂಜೂರಾತಿಗಾಗಿ ತಡೆಹಿಡಿಯಲಾಗಿದೆ. ಮಂಜೂರಾತಿ ದೊರೆತ ನಂತರ ಕಟ್ಟಡವನ್ನು ಪೂರ್ತಿಗೊಳಿಸಲಾಗುವುದು.

ವಿಷಯ : ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು.

ಪ್ರ. 214 (154) ಶ್ರೀ ನಿಂಬಾಳ್‌ಕರ್ (ಸದಲಗ್) .—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ನಳದ ಯೋಜನೆಯ ಸಲುವಾಗಿ ಸರಕಾರಕ್ಕೆ ಹಣ ತುಂಬಿದ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆಗಾಗಿ ಆದ್ಯತೆ ಕೊಡುತ್ತಿರುವುದು ನಿಜವೇ ;

(ಆ) ಹಾಗಾದರೆ ಚಿಕ್ಕೋಡಿ ತಾಲ್ಲೂಕಿನಲ್ಲಿಯ ಸರಕಾರಕ್ಕೆ ಹಣ ತುಂಬಿದ ಗ್ರಾಮ ಪಂಚಾಯತಿಯ ಹೆಸರುಗಳಾವುವು ?

(ಇ) ಇಲ್ಲಿಯವರೆಗೆ ಕೈಕೊಂಡ ಯೋಜನೆಗಳ ಸಂಖ್ಯೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಸರ್ಕಾರಕ್ಕೆ ಶೇ. 10 ರ ವಂತಿಗೆ ಹಣ ಕಟ್ಟಿದಂತಹ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಒದಗಿಸಲು ಸರ್ಕಾರವು ಆದ್ಯತೆ ಕೊಡುವುದು ಹಾಗೂ ಅಂತಹ ಯೋಜನೆಗಳನ್ನು ಮಂಜೂರು ಮಾಡುವಾಗ ಆಯವ್ಯಯದಲ್ಲಿ ಮಂಜೂರಾದ ಹಣದ ಸೌಲಭ್ಯವನ್ನು ಮನದಲ್ಲಿಟ್ಟು ಕೊಳ್ಳಲಾಗುವುದು.

(ಆ) ನಳದ ಯೋಜನೆಯ ಸಲುವಾಗಿ ಚಿಕ್ಕೋಡಿ ತಾಲ್ಲೂಕಿನಲ್ಲಿ ಇದುವರೆಗೆ 24 ಗ್ರಾಮ ಪಂಚಾಯತಿಗಳು ಶೇಕಡಾ 10 ರಂತೆ ವಂತಿಕೆ ಹಣವನ್ನು ಸರಕಾರಕ್ಕೆ ತುಂಬಿರುತ್ತವೆ. ಅವು ಯಾವುವೆಂದರೆ :—

(1) ಅಂಕಲಿ, (2) ಖಿಡಕಲಾಟ, (3) ನಾಯಿಂಗ್ಲಜ, (4) ಅಕ್ಕೋಳ, (5) ಕೋಥಳಿ, (6) ಎಕ್ಷಂಬಾ, (7) ಧುಳಗನವಾಡಿ, (8) ಕರೋಶಿ, (9) ಗಳತಗಾ, (10) ನವಲಿಹಾಳ, (11) ಬೇಡಕಿಹಾಳ, (12) ಬೋರಗಾಂವ, (13) ಚಿಂಚಣಿ, (14) ಮಾಂಗೂರ, (15) ರಾಮಪೂರ, (16) ಶಾಮನೇವಾಡಿ, (17) ಎಡೂರ, (18) ಕುನ್ನೂರ, (19) ಕಾರದಗಾ, (20) ಭೋಜ, (21) ಸೌಂದಲಗಾ, (22) ನೇಜ, (23) ಮಾಂಜರಿ, (24) ಶಿರದ್ವಾಡ–ಜಾನ್ವಾಡ.

(ಇ) 24 ಗ್ರಾಮಗಳ ಪೈಕಿ 22 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ನಳದ ಯೋಜನೆಗಳನ್ನು ಕೈಗೊಳ್ಳಲಾಗಿದೆ.

SRI. M. A. NIMBALKAR .—Out of 22 schemes sanctioned, are there any schemes without 10% deposit amount ?

ಶ್ರೀ ಅಬ್ದುಲ್ ನಜೀರ್‌ಸಾಬ್ .—ಆ ಮಾಹಿತಿ ನನ್ನಲ್ಲಿ ಇಲ್ಲ.

SRI. M. A. NIMBALKAR .—What is the total amount of deposits by the 24 VPs and whether the Government intends to pay interest on it ?

ಶ್ರೀ ಅಬ್ದುಲ್ ನಜೀರ್‌ಸಾಬ್ .—ಆ ಯೋಜನೆಗೆ ತಗುಲುವ ಹತ್ತನೇ ಒಂದರಷ್ಟು ಹಣ ಖರ್ಚು ಮಾಡಿರುತ್ತಾರೆ. ಅದರ ಮೇಲೆ ಬಡ್ಡಿ ಕೊಡುವ ಸಮಸ್ಯೆ ಉದ್ಭವವಾಗುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್ .—10 ಪರ್‌ಸೆಂಟ್ ಹಣ ಕಟ್ಟಿದ ಪಂಚಾಯತಿಗಳು ಈಗಾಗಲೇ ನಳದ ಯೋಜನೆ ಕಾರ್ಯಗತ ಮಾಡಿದ್ದಾರೆ. ಕೆಲವು ಪಂಚಾಯತಿಗಳ ಟೇರ್‌ಮನರು ಮಾಡಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಟ್ಯಾಂಕುಗಳನ್ನು ಕಟ್ಟಿಲ್ಲ. ಇಂಥ ಒಂದು ಪರಿಸ್ಥಿತಿ ಇದೆ. ಆದ್ದರಿಂದ, ಎಲ್ಲೆಲ್ಲಿ ಈ ಯೋಜನೆ ಮುಕ್ತಾಯವಾಗಬೇಕಾಗಿದೆ, ಅವುಗಳನ್ನು ಬಡ್ಜೆಟ್‌ನಲ್ಲಿ ಯಾವುದಾದರೂ ಒಂದು ಯೋಜನೆಯಲ್ಲಿ ಸೇರಿಸಿ ಪೂರೈಸಿಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್ .—ಎಲ್ಲೆಲ್ಲಿ ನಾವು ಪಂಚಾಯತಿಗಳಿಗೆ ವಹಿಸಿಕೊಟ್ಟಿದ್ದೇವೆ, ಎಲ್ಲಿ ನೀರು ಸರಿಯಾಗಿ ದೊರೆಯುತ್ತಿಲ್ಲ ಅದನ್ನು ನಮ್ಮ ಗಮನಕ್ಕೆ ತಂದರೆ ಸರಿಮಾಡುವ ವ್ಯವಸ್ಥೆ ಮಾಡುತ್ತೇವೆ.